# ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಬಿ.ಎಂ.ಫಾರೂಖ್ ಮತ್ತು ಶ್ರೀ ಟಿ.ಎ.ಶರವಣ ಹಾಗೂ ಶ್ರೀ ಕೆ.ಎ. ತಿಪ್ಪೇಸ್ವಾಮಿ ರವರು ನಿಯಮ 330ರ ಅಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಇಂಧನ ಸಚಿವರ ಹೇಳಿಕೆ

ವಿಷಯ: ರಾಜ್ಯದಲ್ಲಿ ಮುಂಗಾರು ಮತ್ತು ಹಿಂಗಾರು ಮಳೆ ಅಭಾವದಿಂದ ತೀವ್ರ ತೆರನಾದ ಬರಗಾಲ ಉಂಟಾಗಿದೆ.ರಾಜ್ಯದ 31 ಜಿಲ್ಲೆಗಳ 234 ತಾಲ್ಲೂಕುಗಳ ಪೈಕಿ 223 ತಾಲ್ಲೂಕುಗಳು ಬರಕ್ಕೆ ತುತ್ತಾಗಿವೆ. ತೀವ್ರ ಬರದ ನಡುವೆ ವಿದ್ಯುತ್ ಬೇಡಿಕೆಯು ಹೆಚ್ಚಾಗುತ್ತಿದೆ. ಮುಂದುವರೆದು. ರಾಜ್ಯದಲ್ಲಿ ಮುಂದುವರೆದ ಒಣಹವೆಯಿಂದ ದೈನಂದಿನ ವಿದ್ಯುತ್ ಬೇಡಿಕೆ ಹೆಚ್ಚಾಗಿದೆ. ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಕೊರತೆಯಿದ್ದು, ಅನಧಿಕೃತವಾಗಿ ಲೋಡ್ ಶೆಡ್ಡಿಂಗ್ ಮಾಡಲಾಗುತ್ತಿದೆ. ಈ ಸಮಸ್ಯೆ ಗ್ರಾಮಾಂತರ ಪ್ರದೇಶಗಳಲ್ಲಿ ಅತೀ ಹೆಚ್ಚಾಗಿದೆ. ಇದರಿಂದ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡದೇ ರೈತರು ಬಳಲಿದ್ದಾರೆ. ಸರ್ಕಾರ ರೈತರ ಪಂಪ್‌ಸೆಟ್‌ಗಳಿಗೆ ಅವಿರತವಾಗಿ 7 ಗಂಟೆಗಳ ವಿದ್ಯುತ್ ಪೂರೈಕೆ ಮಾಡುವುದಾಗಿ ಘೋಷಿಸಿದ್ದರು. ಪೂರೈಕೆ ಕೇವಲ 3 ರಿಂದ 4 ಗಂಟೆಗಳ ಕಾಲ ಮಾತ್ರ. ಇದಲ್ಲದೇ, ಅಘೋಷಿತ ಲೋಡ್‌ಶೆಡ್ಡಿಂಗ್‌ನಿಂದ ವಿದ್ಯಾರ್ಥಿಗಳಿಗೆ, ಅಂಗಡಿಗಳಿಗೆ, ವ್ಯಾಪರಸ್ಥರಿಗೆ, ಹೋಟೆಲ್‌ಗಳಿಗೆ ಮತ್ತು ಕಾರ್ಖಾನೆಗಳಿಗೆ ತುಂಬಾ ಅನಾನುಕೂಲವಾಗುವ ಬಗ್ಗೆ.

*******

ರಾಜ್ಯದಲ್ಲಿ 2023-24 ನೇ ಸಾಲಿನ ಏಪ್ರಿಲ್-2023 ರಿಂದ ಸೆಪ್ಟೆಂಬರ್- 2023 ರ ಅಂತ್ಯದವರೆಗೆ ವಿವಿಧ ಮೂಲಗಳಿಂದ ಲಭ್ಯವಾದ ವಿದ್ಯುತ್ತಿನ ಪ್ರಮಾಣದ 46867.42 ಮಿ.ಯೂ (ತಾತ್ಕಾಲಿಕ) ಗಳಾಗಿರುತ್ತದೆ.

ರಾಜ್ಯದಲ್ಲಿ 2023-24 ರಲ್ಲಿ ಅಂದಾಜಿಸಲಾದ ವಿದ್ಯುತ್ ಬೇಡಿಕೆ ಪ್ರಮಾಣ 89112 ಮಿ.ಯೂ ಗಳಿದ್ದು, ದಿನವಹಿ ಸರಾಸರಿ ಬೇಡಿಕೆ ಪರಿಮಾಣವು ಏಪ್ರಿಲ್-23 ರಿಂದ ಸೆಪ್ಟೆಂಬರ್-2023 ಅಂತ್ಯದವರೆಗೆ 245.06 ಮಿ.ಯೂ ಗಳಾಗಿರುತ್ತದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಮಾಸಿಕ ರಾಜ್ಯದ ಬೇಡಿಕೆಯು ವಿಶೇಷವಾಗಿ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ 32% ರಷ್ಟು ಹೆಚ್ಚಾಗಿದೆ.

ಮೇಲೆ ನಮೂದಾದ ತಿಂಗಳ ಹೆಚ್ಚಿನ ಬೇಡಿಕೆ ನೀಗಿಸಲು ಹಾಗೂ ಮುಂದಿನ ತಿಂಗಳ ಬೇಡಿಕೆಗೆ ಮುಂಜಾಗ್ರತಾ ಕ್ರಮವಾಗಿ ಸರ್ಕಾರವು ಕೈಗೊಂಡ ಕ್ರಮ ಈ ಕೆಳಗಿನಂತಿವೆ.

- ಕೊರತೆಯಾದ ವಿದ್ಯುತ್ತನ್ನು ದಿನವಹಿ ಆಧಾರದಲ್ಲಿ ವಿವಿಧ ವಿದ್ಯುತ್ ವಿನಿಮಯ ಕೇಂದ್ರಗಳಿಂದ ಖರೀದಿ ಮಾಡಲಾಗುತ್ತದೆ. ವಿವರಗಳು ಕೆಳಕಂಡಂತಿವೆ.

| ಆರ್ಥಿಕ ವರ್ಷ 2023-24 (01.04.2023 ರಿಂದ 31.10.2023ರ ಅಂತ್ಯಕ್ಕೆ) ವಿದ್ಯುತ್ ಖರೀದಿ ವಿವರ | | | |
|---|---|---|---|
| ವಿದ್ಯುತ್ ವಿನಿಮಯ ಕೇಂದ್ರಗಳ ಹೆಸರು | ವಿದ್ಯುತ್ ಖರೀದಿ ಪ್ರಮಾಣ (ಎಂ.ಯೂ. ಗಳಲ್ಲಿ) | ಖರೀದಿಸಿದ ಮೊತ್ತ (ರೂ. ಕೋಟಿಗಳಲ್ಲಿ) | ಸರಾಸರಿ ದರ ಪ್ರತಿಯೂನಿಟ್ ಗೆ (ರೂ. ಗಳಲ್ಲಿ) |
| ಐ. ಇ. ಎಕ್ಸ್ | 1544.52 | 1036.12 | 6.71 |
| ಪಿ. ಎಕ್ಸ್. ಐ. ಎಲ್. | 91.31 | 69.20 | 7.58 |
| ಹೆಚ್. ಪಿ. ಎಕ್ಸ್ | 120.50 | 91.97 | 7.63 |
| **ಒಟ್ಟು** | **1756.33** | **1197.29** | **6.82** |

- ರಾಜ್ಯ ಸರ್ಕಾರವು ದಿನಾಂಕ: 16.10.2023ರಿಂದ ಎಲ್ಲಾ ರಾಜ್ಯದ ವಿದ್ಯುತ್ ಉತ್ಪಾದಕರ ಮೇಲೆ ಸೆಕ್ಷನ್-11 ನ್ನು ಜಾರಿಗೊಳಿಸಿರುತ್ತದೆ.
- ರಾಜ್ಯವು ಉತ್ತರಪ್ರದೇಶ ಹಾಗೂ ಪಂಜಾಬ್ ರಾಜ್ಯಗಳಿಂದ ಬ್ಯಾಂಕಿಂಗ್ (Banking/Swapping of Power) ಮೂಲಕ ನವೆಂಬರ್-2023 ರಿಂದ ಮೇ-2024ರ ವರೆಗೆ ವಿದ್ಯುತ್ ಪಡೆಯಲು ಬ್ಯಾಂಕಿಂಗ್ ವ್ಯವಸ್ಥೆ ಮಾಡಿಕೊಳ್ಳಲಾಗಿರುತ್ತದೆ.
- 1000 ಮೆ.ವ್ಯಾ RTC ಮತ್ತು 250 ಮೆ.ವ್ಯಾ Peak ವಿದ್ಯುತ್ತನ್ನು ಮೇ-2024ರ ವರೆಗೆ ಖರೀದಿಸಲು ಡೀಪ್ ಪೋರ್ಟಲ್‌ನಲ್ಲಿ ಟೆಂಡರ್ ಕರೆಯಲಾಗಿರುತ್ತದೆ. ಪ್ರಸ್ತುತ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿ ಇದೆ.
- 302.36 ಮೆ.ವ್ಯಾ ವಿದ್ಯುತ್ತನ್ನು ದಿನಾಂಕ: 24.11.2023 ರಿಂದ 30.06.2024 ರವರೆಗೆ ಕರ್ನಾಟಕ ರಾಜ್ಯಕ್ಕೆ ನೀಡಲು ಕೇಂದ್ರ ವಿದ್ಯುತ್ ಮಂತ್ರಾಲಯವು (MoP) ದಿನಾಂಕ: 22.11.2023 ರ ಪತ್ರದಲ್ಲಿ ಅನುಮೋದನೆ ನೀಡಿರುತ್ತದೆ.

ರಾಜ್ಯದಲ್ಲಿ ಪ್ರಸ್ತುತ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯ ನಗರ, ಪಟ್ಟಣ ಪ್ರದೇಶ, ಗ್ರಾಮಗಳಿಗೆ, ಕುಡಿಯುವ ನೀರಿನ ಯೋಜನೆಯ ಸ್ಥಾವರಗಳಿಗೆ ಮತ್ತು ನಿರಂತರ ಜ್ಯೋತಿ ಯೋಜನೆಯು ಅನುಷ್ಠಾನಗೊಂಡಿರುವ ಫೀಡರ್‌ಗಳಿಗೆ ದಿನವಹಿ 24 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಗ್ರಾಮೀಣ ಪ್ರದೇಶಗಳ ಕೃಷಿ ಪಂಪ್‌ಸೆಟ್ ಫೀಡರ್‌ಗಳಿಗೆ ದಿನವಹಿ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಮಿಶ್ರಿತ ಹೊರೆ ಹೊಂದಿರುವ ಗ್ರಾಮೀಣ ಫೀಡರ್‌ಗಳಿಗೆ ದಿನವಹಿ 7 ಗಂಟೆಗಳ ಕಾಲ 3 ಫೇಸ್ ಮತ್ತು ರಾತ್ರಿಯ ವೇಳೆ 9 ಗಂಟೆಗಳ ಕಾಲ ಸಿಂಗಲ್ ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ರಾಜ್ಯದಲ್ಲಿ ಸದ್ಯ ಯಾವುದೇ ವಿದ್ಯುತ್ ಕೊರತೆ ಇರುವುದಿಲ್ಲ.

ಸಂಖ್ಯೆ:ಎನರ್ಜಿ 317 ಇಬಿಎಸ್ 2023

(ಕೆ.ಜೆ.ಜಾರ್ಜ್) 13/12
ಇಂಧನ ಸಚಿವರು